ಅತ್ಯುತ್ತಮ ಅಕ್ಕಿ	ರೂ. ೨-೧೦ ಪ್ರತಿ ಕೆ.ಜಿ.ಗೆ
ಉತ್ತಮ ಅಕ್ಕಿ	ರೂ. ೧-೯೫ ,,
ಸಾಮಾನ್ಯ ಅಕ್ಕಿ	ರೂ. ೧-೮೫ ,,

ಗ್ರಾಮೀಣ ಪ್ರದೇಶವಲ್ಲಿ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣ ಕಡಿಮೆ ಇದ್ದಾಗ್ಯೂ ಅದು ರಿಯಾಯಿತಿ ದರದಲ್ಲಿ ದೊರೆಯುತ್ತಿದೆ. ಭಾರತ ಸರ್ಕಾರವು ಈ ಯೋಜನೆಗಾಗಿ ಹೆಚ್ಚು ಹಂಚಿಕೆ ಮಾಡದೇ, ಗ್ರಾಮೀಣ ಪ್ರದೇಶದಲ್ಲಿ, ಹೆಚ್ಚಿನ ಪ್ರಮಾಣದಲ್ಲಿ ವಿತರಿಸಲಾಗುವುದಿಲ್ಲ.

೯) ಬ್ರಹ್ಮಾವರ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳಿಲ್ಲದಿರುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರವಾದ ಬ್ರಹ್ಮಾವರದಲ್ಲಿ ಸರಕಾರಿ ಆರೋಗ್ಯ ಕೇಂದ್ರವಿದ್ದು ಅದರಲ್ಲಿ ೭ ಮಂದಿ ವೈದ್ಯಾಧಿಕಾರಿಗಳು ಇರುತ್ತಾರೆ. ಕಳೆದ ಒಂದು ವಾರದಿಂದ ಈ ಆರೋಗ್ಯ ಕೇಂದ್ರದಲ್ಲಿ ಒಬ್ಬರೇ ಒಬ್ಬರು ವೈದ್ಯಾಧಿಕಾರಿಗಳಿಲ್ಲದೆ ಜನರಿಗೆ ಬಹಳಷ್ಟು ಅನಾನುಕೂಲವಾಗಿದೆ. ದಿನಾಂಕ ೨೪ನೇ ಸೋಮವಾರ ಳಿಂಕ್ಕೂ ಮಿಕ್ಕಿದ ಹಸುಳೆಗಳು ಮತ್ತು ತಾಯಂದಿರು ಪಟ್ಟ ಬವಣೆಯ ಬಗ್ಗೆ ದಿನಪತ್ರಿಕೆಯಲ್ಲಿ ವಿವರ ಬಂದಿರುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ವಿವರವಾದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ನೀಡಬೇಕು ಹಾಗೂ ತತ್‌ಕ್ಷಣವೇ ವೈದ್ಯಾಧಿಕಾರಿಗಳನ್ನು ನೇಮಿಸ ಬೇಕೆಂದು ನಿಮ್ಮ ಮುಖಾಂತರ ಒತ್ತಾಯ ಪಡಿಸುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಆರೋಗ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ ಅವರ ಗಮನಕ್ಕೆ ತಂದು ನಾಳೆ ಉತ್ತರ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

೧೦) ಹಿರಿಯೂರು ಪುರಸಭೆಯವರು ಕಂದಾಯ ವಸೂಲಾತಿ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಿರುವಂತೆ ನಿರ್ಬಂಧವನ್ನು ಹೇರುವುದು

ಶ್ರೀ ಆರ್. ರಾವ ಯ್ಯ (ಹಿರಿಯೂರು).—ಹಿರಿಯೂರುನಗರದ ಪುರಸಭೆಯ ಸರಹದ್ದನ್ನು ವಿಸ್ತರಿಸಿರು ವುದರಿಂದ ನಗರದ ಅಂಚಿನಲ್ಲಿರುವ ನಂಜಯ್ಯಕೊಟ್ಟಿಗೆ ಕೆ.ಎಂ. ಕೊಟ್ಟಿಗೆ. ವೇದಾವತಿ ನಗರ, ಹೊರಬಬ್ಬೂರು, ಈ ಹಳ್ಳಿಗಳಲ್ಲಿ ಈಗಾಗಲೇ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಚುನಾವಣೆ ನಡೆದು ಪ್ರತಿನಿಧಿಗಳು ಸಹ ಆಯ್ಕೆಯಾಗಿದ್ದಾರೆ. ಆದರೆ ಪುರಸಭೆಯವರು ಈ ಹಳ್ಳಿಗಳು ನಮ್ಮ ಆಧೀನಕ್ಕೆ ಸೇರಿವೆಯೆಂದು ಅಂಗಡಿಗಳಿಂದ ಮನೆ ಕಂದಾಯವನ್ನು ವಸೂಲು ಮಾಡಲು ಪ್ರಾರಂಭಿಸಿದೆ. ಇತ್ತ ಜನ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್‌ಗೆ ಮತ ಕೊಟ್ಟು ಇತ್ತಕಡೆ ಯಿಂದಲೂ ಸಹಾಯ ಪಡೆಯಲು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊಂದಲು ಪುರಸಭೆ ಅಡ್ಡಬರುತ್ತಿದೆ. ಆದುದರಿಂದ ಸರಕಾರ ಆಯ್ಕೆಯಾದ ಪ್ರತಿನಿಧಿಗಳ ಅವಧಿ ಮುಗಿಯುವವರೆಗೆ ಪುರಸಭೆಯವರು ಯಾವ ವಿಧದ ವಸೂಲಾತಿ ಮತ್ತು ಅಭಿವೃದ್ಧಿ ಕೆಲಸವನ್ನು ಕೈಗೊಳ್ಳಲು ನಿರ್ಬಂಧ ವನ್ನು ಹೇರಬೇಕೆಂದು ಅಲ್ಲಿಯ ಜನ ಬಯಸುತ್ತಿದೆ. ಇದರ ಬಗ್ಗೆ ಸರ್ಕಾರದ ಆಶ್ವಾಸನೆ ಏನು?

ಶ್ರೀ ಎಂ. ರಘುಪತಿ.—ಈ ವಿಷಯದಲ್ಲಿ ಸಂಬಂಧಪಟ್ಟ ಮುನಿಸಿಪಲ್ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಸೂಕ್ತ ಪರಿಹಾರ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆಂದೂ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

(೧೧) ಹೊನ್ನಾವರ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ನಿರ್ವಹಣೆ ಅತೃಪ್ತಿಯಾಗಿರುವುದು

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲ್ಲೂಕಿನ ಕೆ.ಇ.ಬಿ.ಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿರುವವರು ಸುಮಾರು ಐದು ವರ್ಷಕ್ಕೆ ಹತ್ತಿರವಾದಷ್ಟು ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಈ ಮಹಾಶಯರು ಹೊನ್ನಾವರದಲ್ಲಿ ಕೆಲಸಕ್ಕೆ ಹಾಜರಾದುದಿನಿಂದ ನಿಧಾನವಾಗಿ ದಿನಾಲೂ ವಿದ್ಯುತ್ ಸಂಪರ್ಕ ನಿಂತು ಹೋಗಲು ಸಂಭವಗಳು ಹೆಚ್ಚುತ್ತಾ ಹೋಗಿ ಈಗ ದಿನಾಲು ನಿಷ್ಪ ಪಕ್ಷ ಹತ್ತು ಸಲಕ್ಕಿಂತ ಹೆಚ್ಚಾಗಿದೆ ಅಂದರೆ ವರ್ಷಕ್ಕೆ ಸುಮಾರು ೩೦೦೦ಕ್ಕಿಂತ ಹೆಚ್ಚಿನ ಸಲ ಮುನ್ಸೂಚನೆ ಇಲ್ಲದೆ ವಿದ್ಯುತ್ ಸಂಪರ್ಕ ನಿಂತು ಹೋಗುತ್ತದೆ. ಸಂಪರ್ಕ ನಿಂತ ಬಗ್ಗೆ